

# ಕಿಮ್ ಕಿ ಡುಕ್

ದಕ್ಷಿಣ ಕೊರಿಯಾದ ನಿರ್ದೇಶಕ ಕಿಮ್ ಕಿ ಡುಕ್ ತನ್ನ ವಿಲಕ್ಷಣ ಸಿನಿಮಾಗಳಿಂದಲೇ ಜನಪ್ರಿಯತೆ ಗಳಿಸಿರುವವನು. ಡಿಸೆಂಬರ್ 20, 1960ರಂದು ದಕ್ಷಿಣ ಕೊರಿಯಾದ ಬೋಂಗ್ವಾ ಎಂಬ ಸ್ಥಳದಲ್ಲಿ ಜನಿಸಿದ ಇವನು, 1990ರಲ್ಲಿ ಪ್ಯಾರಿಸ್‌ಗೆ ತೆರಳಿ ಲಲಿತಕಲೆ ಅಭ್ಯಾಸ ಮಾಡಿದ. 1995ರಲ್ಲಿ ಚಿತ್ರಕಥೆ ಬರವಣಿಗೆ ಮೂಲಕ ಚಿತ್ರರಂಗ ಪ್ರವೇಶಿಸಿದ ಅವನು ಅದೇ ವರ್ಷ ಕೊರಿಯನ್ ಫಿಲಂ ಕೌನ್ಸಿಲ್ ಏರ್ಪಡಿಸಿದ ಸ್ಪರ್ಧೆಯಲ್ಲಿ ಬಹುಮಾನವನ್ನೂ ಗೆದ್ದುಕೊಂಡ. ಕಿಮ್ ಕಿ ಡುಕ್ ಮೊದಲ ಸಿನಿಮಾ 1996ರಲ್ಲಿ ಬಂದ 'ಕ್ರೊಕೊಡೈಲ್'. ಅದೇ ವರ್ಷ ಅವನು 'ವೈಲ್ಡ್ ಆ್ಯನಿಮಲ್ಸ್' ಎನ್ನುವ ಇನ್ನೊಂದು ಚಿತ್ರವನ್ನೂ ಮಾಡಿದ. ಈ ಎರಡೂ ಚಿತ್ರಗಳೂ ಅವನಿಗೆ ಸಾಕಷ್ಟು ಜನಪ್ರಿಯತೆ ತಂದುಕೊಟ್ಟವು. ಆದರೆ ಅವನು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದು 2000ರಲ್ಲಿ ಬಿಡುಗಡೆಯಾದ 'ದಿ ಐಲ್' ಚಿತ್ರದ ಮೂಲಕ.

ಸಿನಿಮಾಭ್ಯಾಸಿಗಳಿಗೆ ಕಿಮ್ ಕಿ ಡುಕ್ ಕಲಿಕೆಯ ವಿದ್ಯಾಲಯ. 'ಸ್ಪ್ರಿಂಗ್, ಸಮ್ಮರ್, ಫಾಲ್, ವಿಂಟರ್... ಆ್ಯಂಡ್ ಸ್ಪ್ರಿಂಗ್' ಅನ್ನು ಡುಕ್‌ನ ಮಾಸ್ಟರ್ ಪೀಸ್ ಎಂದೇ ಗುರ್ತಿಸಲಾಗುತ್ತದ. 'ಥ್ರಿ ಐರನ್', 'ಸಮರಿಟನ್ ಗರ್ಲ್ಸ್', 'ಬ್ಯೂಟಿಫುಲ್', 'ಪಿಯೆಟಾ', 'ಟೈಮ್', 'ದಿ ನೆಟ್', 'ಡ್ರೀಮ್', 'ರಫ್ ಕಟ್' ಇವನ ಇನ್ನಿತರ ಜನಪ್ರಿಯ ಸಿನಿಮಾಗಳು. ಇದುವರೆಗೆ ಅವನು 32 ಸಿನಿಮಾಗಳನ್ನು ನಿರ್ದೇಶಿಸಿದ್ದಾರೆ. ಬರ್ಲಿನ್, ವೆನಿಸ್, ಕಾನ್ ಸೇರಿದಂತೆ ಹಲವು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಅತ್ಯುತ್ತಮ ನಿರ್ದೇಶನ, ಅತ್ಯುತ್ತಮ ಸಿನಿಮಾ ಸೇರಿದಂತೆ ಹಲವು ಪ್ರಶಸ್ತಿಗಳು ದೊರಕಿವೆ.

ಜನಪ್ರಿಯತೆಯ ಜತೆಗೆ ವಿವಾದಗಳೂ ಡುಕ್‌ನಲ್ಲಿ ಮತ್ತೆ ಮತ್ತೆ ಸುತ್ತಿಕೊಳ್ಳುತ್ತಲೇ ಇರುತ್ತವೆ. ಬಹುತೇಕ ವಿವಾದಗಳು ಇವನ ಚಿತ್ರಗಳಲ್ಲಿನ ಹಿಂಸೆಗೆ ಸಂಬಂಧಪಟ್ಟವೇ ಆಗಿವೆ. ಆ ಎಲ್ಲ ತಕರಾರು ವಿವಾದಗಳನ್ನೂ ಮೀರಿ ಕಿಕ್ ಕಿ ಡುಕ್ ಹೊಸ ತಲೆಮಾರಿನ ದೊಡ್ಡ ಸಮುದಾಯಕ್ಕೆ ನೆಚ್ಚಿನ ನಿರ್ದೇಶಕನಾಗಿ ಬೆಳೆದಿದ್ದಾನೆ.

ಮನೆಯಲ್ಲಿ ಒಬ್ಬ ಬೌದ್ಧ ಗುರು ಮತ್ತೆ ಪುಟಾಣಿ ಶಿಷ್ಯ. ಒಂದೇ ಕೋಣೆಯ ಆ ಮನೆಯ ನಡುಭಾಗದಲ್ಲಿ ಬುದ್ಧನ ಹಳೆಯ ವಿಗ್ರಹ. ಅದರ ಎಡಪಕ್ಕ ಒಂದು ಬಾಗಿಲು. ಬಾಗಿಲಷ್ಟೆ. ಅದಕ್ಕೆ ಆತುಕೊಂಡು ಇರಬೇಕಾದ ಗೋಡೆಗಳೇ ಇಲ್ಲ! ಆದರೂ ಆ ಗುರು, ಶಿಷ್ಯ ಎಂದಿಗೂ ಬಾಗಿಲ ಆಚೆಯ ಖಾಲಿ ಸ್ಥಳದಿಂದ ದಾಟುವುದಿಲ್ಲ. (ಶಿಷ್ಯ ಒಮ್ಮೆ ದಾಟುತ್ತಾನೆ. ಅದು ಅವನ ಬದುಕಿನ ಅನಾಹುತಗಳ ಆರಂಭವೂ ಆಗುತ್ತದೆ). ಆ ಬಾಗಿಲನ್ನು ತೆರೆದು ಹೊರಬಂದು ಮತ್ತೆ